ಕೃಷ್ಣಾನದಿ ನೀರಿನ ಉಪಯೋಗದ ಬಗ್ಗೆ

೧೪೬೭(೨೮೪೦) ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕೃಷ್ಣಾನದಿ ನೀರಿನ ಹೆಚ್ಚುವರಿ ಪಾಲಿನಲ್ಲಿ ಕರ್ನಾಟಕಕ್ಕೆ ದೊರೆಯಬಹುದಾದ ನೀರಿನ ಪ್ರಮಾಣವೆಷ್ಟು ?

ಆ) ರಾಜ್ಯದ ನಿರ್ಮಾಣ ಹಂತದಲ್ಲಿರುವ ಎಲ್ಲಾ ಯೋಜನೆಗಳಲ್ಲಿ ಬಳಕೆಯಾಗಬಹುದಾದ ಕೃಷ್ಣಾನದಿ ನೀರಿನಪ್ರಮಾಣವೆಷ್ಟು ?

ಇ) ಆಂಧ್ರ ಪ್ರದೇಶ ಸರ್ಕಾರ ತನಗೆ ಬರಬಹುದಾದ ನೀರಿಗಿಂತಲೂ ಹೆಚ್ಚು ನೀರನ್ನು ಉಪಯೋಗಿಸುತ್ತಿದ್ದು ಇನ್ನೂ ಹೆಚ್ಚು ನೀರನ್ನು ಬಳಸಲು ''ತೆಲುಗು ಗಂಗಾ'' ಯೋಜನೆ ರೂಪಿಸುತ್ತಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಕೃಷ್ಣಾನದಿ ನೀರಿನಲ್ಲಿ ತನ್ನ ನ್ಯಾಯಬದ್ಧ ಪಾಲು ಪಡೆಯಲು ರಾಜ್ಯ ಸರ್ಕಾರವು ಕೈಗೊಂಡಿರುವ ಪ್ರಯತ್ನಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಲಭ್ಯವಿರುವ ಹೆಚ್ಚುವರಿ ನೀರಿನ ಪಾಲನ್ನು ಹಿಪ್ಪರಗಿ ಟಿ.ಎಂ.ಸಿ. ಎಂದು ಲೆಕ್ಕ ಹಾಕಲಾಗಿದ್ದು ಅದರಲ್ಲಿ ಶೇ. ೫೦ ಭಾಗ ಅಂದರೆ ೧೧೬.೫೦ ಟಿ. ಎಂ. ಸಿ. ಕರ್ನಾಟಕಕ್ಕೆ ದೊರೆಯುತ್ತದೆ.

ಆ) ಪೂರ್ಣವಾಗಿರುವ ಯೋಜನೆಗಳಿಂದ ೩೯೮ ಟಿ. ಎಂ. ಸಿ. ಮತ್ತು ನಿರ್ಮಾಣವಾಗುತ್ತಿರುವ ಯೋಜನೆಗಳಿಂದ ೨೪೮ ಟಿ. ಎಂ. ಸಿ.

ಇ) ಹೌದು.

ಈ) ತೆಲುಗು ಗಂಗಾ ಯೋಜನೆಗೆ ಅನುಮೋದನೆ ನೀಡಬಾರದೆಂದು ಭಾರತ ಸರ್ಕಾರಕ್ಕೆ ಕರ್ನಾಟಕ ಸರ್ಕಾರವು ವಿರೋಧ ಸಲ್ಲಿಸಿದೆ ಅಲ್ಲದೆ, ಸ್ಕೀಮ್ 'ಬಿ' ಯನ್ನು ತಕ್ಷಣ ಅನುಷ್ಠಾನಗೊಳಿಸಿ ತನಗೆ ದೊರೆಯಬೇಕಾದ ಹೆಚ್ಚು ನೀರನ್ನು ಉಪಯೋಗಿಸಿಕೊಳ್ಳಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸಲಾಗುತ್ತಿದೆ.

ಬೆಂಗಳೂರಿನ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿ. ನ ನಷ್ಟದ ಬಗ್ಗೆ

೧೪೮೮ (೨೮೪೨) ಶ್ರೀ ಪ್ರತಾಪಚಂದ್ರಶೆಟ್ಟಿ ಕೆ. (ಕುಂದಾಪುರ).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಲಿಮಿಟೆಡ್‌ನಲ್ಲಿ ಸರ್ಕಾರದವರು ಹೂಡಿರುವ ಒಟ್ಟು ಬಂಡವಾಳವೆಷ್ಟು?

ಆ) ಕೆ. ಎ. ಐ. ಸಿ. (ಲಿ) ಈವರೆಗೆ ಅನುಭವಿಸಿರುವ ನಷ್ಟದ ವರ್ಷವಾರು ವಿವರಗಳನ್ನೊದಗಿಸುವುದು? (ಮೂರು ವರ್ಷಗಳ ವಿವರ ನೀಡುವುದು).

ಇ) ಕೆ. ಎ. ಐ. ಸಿ. ನಲ್ಲಿ ಹಣದ ದುರ್ವಿನಿಯೋಗದ ಎಷ್ಟು ಪ್ರಕರಣಗಳು ಆಡಿಟ್ ಮತ್ತಿತರ ವರದಿಯನ್ವಯ ಬೆಳಕಿಗೆ ಬಂದಿರುತ್ತದೆ ?

ಈ) ಮೇಲ್ಕಂಡ ಪ್ರಕರಣಗಳಲ್ಲಿ ಸರ್ಕಾರದವರು ತಪ್ಪಿತಸ್ಥರ ಮೇಲೆ ಕೈಗೊಂಡಿರುವ ಕ್ರಮಗಳೇನು ?